## ಕಥಾಪ್ರಭ

# ಸಾವನ್ನು ಗೆದ್ದ ಸಾವಿತ್ರಿ

(ವಿವೇಕಾನಂದರು ಹೇಳಿದ ಕಥೆ)

ಅಶ್ವಪತಿಯೆಂಬ ರಾಜನಿದ್ದ. ಅವನಿಗೊಬ್ಬಳು ಮಗಳಿದ್ದಳು. ಅವಳು ಬಹಳ ಒಳ್ಳೆಯವಳು. ಅತಿ ಸುಂದರಳಾಗಿದ್ದಳು. ಅವಳಿಗೆ ಸಾವಿತ್ರಿ ಎಂದು ಹೆಸರು ಕೊಟ್ಟರು. ಸಾವಿತ್ರಿ ಪ್ರಾಪ್ತವಯಸ್ಕಳಾದಾಗ ತಂದೆಯು ಮಗಳನ್ನು ಕುರಿತು, "ನೀನೇ ಒಬ್ಬ ವರನನ್ನು ಆರಿಸಿಕೋ" ಎಂದನು. ನೋಡಿ, ಪುರಾತನ ಕಾಲದ ಭಾರತದ ರಾಜಕುಮಾರಿಯರು ಬಹಳ ಸ್ವಾತಂತ್ರ್ಯಪ್ರಿಯರು. ಅವರು ತಾವೇ ಅರಸುಮಕ್ಕಳನ್ನು ಗಂಡನಾಗಿ ಆರಿಸಿಕೊಳ್ಳುತ್ತಿದ್ದರು. ಸಾವಿತ್ರಿ ಅದಕ್ಕೆ ಒಪ್ಪಿದಳು. ಚಿನ್ನದ ರಥವನ್ನೇರಿದಳು. ಅವಳ ತಂದೆ ನೇಮಿಸಿದ ಸೇವಕರು ಮತ್ತು ವೃದ್ಧ ಊಳಿಗದವರೊಡನೆ ಹೊರಟಳು. ಎಷ್ಟೋ ರಾಜಧಾನಿಗಳಲ್ಲಿ ತಂಗಿ, ಎಷ್ಟೋ ರಾಜಕುಮಾರನನ್ನು ನೋಡಿದಳು. ಆದರೆ ಯಾರೂ ಸಾವಿತ್ರಿಯ ಒಪ್ಪಿಗೆಗೆ ಅರ್ಹರಾಗಿರಲಿಲ್ಲ. ಕೊನೆಗೆ ಅವರೊಂದು ಪರ್ಣಶಾಲೆಗೆ ಬಂದರು.

ದ್ಯುಮತ್ಸೇನನೆಂಬ ರಾಜನಿದ್ದ. ಅವನು ವೈರಿಗಳ ಕೈಯಲ್ಲಿ ಸೋತು, ರಾಜ್ಯವನ್ನು ಕಳೆದುಕೊಂಡು ವೃದ್ಧನಾಗಿ ಕಣ್ಣು ಕಳೆದುಕೊಂಡ. ಈ ವೃದ್ಧನೂ ದರಿದ್ರ ಅಂಧನೂ ಆದ ದೊರೆ ತನ್ನ ರಾಣಿ ಮತ್ತು ಮಗನೊಂದಿಗೆ ಕಾಡಿನಲ್ಲಿ ಆಶ್ರಯ ಪಡೆದು, ತಪಸ್ಸಿನಲ್ಲಿ ನಿರತನಾಗಿದ್ದನು. ಅವನ ಮಗನ ಹೆಸರು ಸತ್ಯವಾನ್.

ಹಲವು ಅರಸರ ಆಸ್ಥಾನಗಳೆಲ್ಲ ನೋಡಿದ ಮೇಲೆ ಸಾವಿತ್ರಿ ಈ ಪರ್ಣಶಾಲೆಗೆ ಬಂದಳು. ಎಂತಹ ದೊಡ್ಡ ರಾಜನಾಗಿರಲಿ, ಪರ್ಣಶಾಲೆಯ ಮುಂದೆ ಹೋಗುವಾಗ ಅಲ್ಲಿರುವ ಋಷಿಗಳನ್ನು ಪೂಜ್ಯ ದೃಷ್ಟಿಯಿಂದ ಗೌರವದಿಂದ ನೋಡುತ್ತಿದ್ದನು. ಸಾವಿತ್ರಿ ಪರ್ಣಶಾಲೆಗೆ ಬಂದು ಋಷಿಯ ಮಗ ಸತ್ಯವಾನನನ್ನು ಕಂಡಳು. ಅವನು ಅವಳ ಹೃದಯವನ್ನು ತಕ್ಷಣ ಒಲಿಸಿಕೊಂಡನು. ಎಲ್ಲಾ ಆಸ್ಥಾನಗಳ, ಅರಮನೆಗಳಲ್ಲಿರುವ ಅರಸು ಮಕ್ಕಳಿಗೆ ಅವಳ ಒಲುಮೆ ಪಡೆಯಲು ಆಗಿರಲಿಲ್ಲ. ಅಂತಹವಳ ಹೃದಯವನ್ನು ದ್ಯುಮತ್ಸೇನನ ಪರ್ಣಶಾಲೆಯಲ್ಲಿದ್ದ ಸತ್ಯವಾನನು ಗೆದ್ದುಕೊಂಡನು.

ಸಾವಿತ್ರಿ ತಂದೆಯ ಮನೆಗೆ ಹಿಂತಿರುಗಿ ಬಂದ ಮೇಲೆ, ತಂದೆ "ಮಗು ಸಾವಿತ್ರಿ, ಮಾತನಾಡು. ನೀನು ಮದುವೆಯಾಗಲು ಯಾರನ್ನಾದರೂ ನೋಡಿಕೊಂಡು ಬಂದಿದ್ದೀಯಾ?" ಎಂದು ಕೇಳಿದನು. ಸಾವಿತ್ರಿ ಮೆಲುಧ್ವನಿಯಲ್ಲಿ, ಲಜ್ಜೆಯಿಂದ "ಹೌದು, ಅಪ್ಪ" ಎಂದಳು. ತಂದೆ ಆ ರಾಜಕುಮಾರನ ಹೆಸರೇನು ಎಂದು ಕೇಳಿದನು. ಆಗ ಸಾವಿತ್ರಿಯು "ಅವನು ರಾಜಕುಮಾರನಲ್ಲ. ರಾಜ್ಯವನ್ನು ಕಳೆದುಕೊಂಡ ದ್ಯುಮತ್ಸೇನನ ಮಗ. ರಾಜ್ಯವಿಲ್ಲದ ರಾಜಕುಮಾರ. ಅವನು ಆಶ್ರಮವಾಸಿ. ಸಂನ್ಯಾಸಿಯಂತೆ ಇದ್ದಾನೆ. ಒಂದು ಪರ್ಣಶಾಲೆಯಲ್ಲಿ ವಾಸಿಸುತ್ತಿರುವ ವಯಸ್ಸಾದ ತಂದೆ, ತಾಯಿಗಳನ್ನು ನೋಡಿಕೊಳ್ಳುತ್ತಾನೆ. ಅವರಿಗಾಗಿ ಹಣ್ಣು ಹಂಪಲುಗಳನ್ನು ಆರಿಸಿ ತರುತ್ತಾನೆ" ಎಂದಳು.

ಇದನ್ನು ಕೇಳಿ ರಾಜನು ಅಲ್ಲಿಗೆ ಬಂದಿದ್ದ ನಾರದರ ಸಲಹೆಯನ್ನು ಕೇಳಿದನು, "ಇದರಷ್ಟು ಅಮಂಗಳದ ಆಯ್ಕೆಯ ಪ್ರಶ್ನೆಯೇ ಇಲ್ಲ" ಎಂದರವರು. ರಾಜ ಹೇಗೆಂದು ಕೇಳಿದಾಗ ನಾರದರು, "ಮದುವೆಯಾದ ಹನ್ನೆರಡು ತಿಂಗಳಿಗೆ ಆ ಯುವಕ ಸಾಯುತ್ತಾನೆ" ಎಂದರು. ರಾಜ ಭಯದಿಂದ ಕಂಪಿತನಾದನು. "ಸಾವಿತ್ರಿ, ಹನ್ನೆರಡು ತಿಂಗಳಲ್ಲಿ ಆ ಹುಡುಗ ಸಾಯುವನಂತೆ, ಆಗ ನೀನು ವಿಧವೆಯಾಗುವೆ; ಇದನ್ನು ಆಲೋಚಿಸಿ ನೋಡು. ನಿನ್ನ ಆಯ್ಕೆಯನ್ನು ಕೈಬಿಡು. ಈ ಆಯಸ್ಸಿಲ್ಲದವನಿಗೆ ನಿನ್ನನ್ನು ನಾನು ಎಂದಿಗೂ ಲಗ್ನ ಮಾಡಿಕೊಡುವುದಿಲ್ಲ" ಎಂದನು. ಆಗ ಸಾವಿತ್ರಿ ಹೀಗೆಂದಳು, " ಅಪ್ಪಾ, ಚಿಂತೆಯಿಲ್ಲ. ದಯವಿಟ್ಟು ಇನ್ನೊಬ್ಬನನ್ನು ಮದುವೆಯಾಗಿ, ನನ್ನ ಮನದ ಪಾತಿವ್ರತ್ಯವನ್ನು ಬಲಿಕೊಡು ಎನ್ನಬೇಡ. ನಾನು ಅವನನ್ನು ಪ್ರೀತಿಸುತ್ತಿದ್ದೇನೆ. ಅವನು ಶೀಲಸಂಪನ್ನನಾಗಿದ್ದಾನೆ. ಧೀರ. ಸತ್ಯವಾನನನ್ನು ನಾನು ಪತಿಯೆಂದು ಮನದಲ್ಲಿ ಸ್ವೀಕರಿಸಿದ್ದೇನೆ. ಕನ್ಯೆಯೊಬ್ಬಳು ವರನನ್ನು ಆರಿಸಿಕೊಳ್ಳುವುದು ಒಂದೇ ಬಾರಿ. ಅದಕ್ಕೆ ಅವಳು ವಿಮುಖಳಾಗುವುದಿಲ್ಲ" ಎಂದಳು.

ಸಾವಿತ್ರಿ ದೃಢಮನಸ್ಕಳಾಗಿರುವುದನ್ನು ಕಂಡು, ತಂದೆ ಮದುವೆಗೆ ಒಪ್ಪಲೇಬೇಕಾಯಿತು. ಹೀಗೆ ಸಾವಿತ್ರಿಯು ಸತ್ಯವಾನನನ್ನು ಮದುವೆಯಾದಳು. ತನ್ನ ಅರಮನೆಯಿಂದ ತಾನೊಲಿದ ಪತಿಯೊಡನೆ ಬಾಳಲು, ಯಾವ ಉದ್ವೇಗವೂ ಇಲ್ಲದೆ ಕಾಡಿಗೆ ಹೊರಟು ನಿಂತಳು. ಅಲ್ಲಿ ಸತ್ಯವಾನನ ತಂದೆತಾಯಿಗಳ ಸೇವೆ ಮಾಡಲು ಆರಂಭ ಮಾಡಿದಳು. ಸತ್ಯವಾನನ ಸಾವಿನ ಸಂಗತಿಯನ್ನು ಅವಳು ಗುಟ್ಟಾಗಿಟ್ಟಿದ್ದಳು. ಪ್ರತಿದಿನವೂ ಸತ್ಯವಾನ್ ಕಾಡಿಗೆ ಹೋಗಿ ಹಣ್ಣುಹೂವುಗಳನ್ನು ಆಯ್ದು , ಕಟ್ಟಿಗೆಯನ್ನು ಹೊತ್ತು ಪರ್ಣಶಾಲೆಗೆ ತರುತ್ತಿದ್ದನು. ಸಾವಿತ್ರಿಯು ಮನೆಗೆಲಸ ಮಾಡಿ ವೃದ್ಧ ಅತ್ತೆಮಾವಂದಿರ ಸೇವೆಯನ್ನೂ ಮಾಡುತ್ತಿದ್ದಳು.

ಹನ್ನೆರಡು ತಿಂಗಳು ಕಳೆಯುತ್ತ ಬಂತು. ದುರಂತದ ದಿನಕ್ಕೆ ಕೇವಲ ಮೂರು ದಿನಗಳು ಮಾತ್ರ ಉಳಿದಿತ್ತು. ಮೂರು ದಿನವೂ ಸಾವಿತ್ರಿ ಉಪವಾಸ, ಪ್ರಾರ್ಥನೆಗಳ ಕಠಿಣ ವ್ರತವನ್ನು ಕೈಗೊಂಡಳು. ದುಃಖದಿಂದ ನಿದ್ರೆ ಮಾಡದೆ, ರಾತ್ರಿಯನ್ನೆಲ್ಲ ಪ್ರಾರ್ಥನೆಯಲ್ಲಿ ಕಳೆದಳು. ಇತರರಿಗೆ ಕಾಣದಂತೆ ಕಣ್ಣೀರು ಹರಿಸಿದಳು.

ಸಾವಿನ ದುರಂತದ ದಿನ ಬಂದೇ ಬಿಟ್ಟಿತು. ಅಂದು ಸತ್ಯವಾನನಿಂದ ಒಂದು ಕ್ಷಣವೂ ಸಾವಿತ್ರಿ ಅಗಲಲಿಲ್ಲ. ಗಂಡ ಹಣ್ಣು ಹಂಪಲುಗಳನ್ನು ತರಲು ಕಾಡಿಗೆ ಹೋದಾಗ, ತಾನೂ ಗಂಡನನ್ನು ಹಿಂಬಾಲಿಸಿದಳು. ಸತ್ಯವಾನ್ ಏಕೋ ಸುಸ್ತಾಗುತ್ತದೆ ಎಂದು ತಡೆದು ತಡೆದು ಹೇಳಿದನು, " ಪ್ರಿಯೆ ಸಾವಿತ್ರಿ, ನನ್ನ ತಲೆ ಏಕೋ ಸುತ್ತುತ್ತಿದೆ, ಕೈಕಾಲುಗಳು ಸೋಲುತ್ತಿವೆ. ಕಣ್ಣಿಗೆ ಕತ್ತಲು ಕವಿಯುವಂತಿದೆ. ಸ್ವಲ್ಪ ನಿನ್ನ ಸಮೀಪದಲ್ಲಿ ಮಲಗುತ್ತೇನೆ" ಎಂದನು. "ಪ್ರಿಯತಮ, ನನ್ನ ತೊಡೆಯ ಮೇಲೆ ಮಲಗಿ" ಎಂದಳು ಸಾವಿತ್ರಿ, ಸುಡುತ್ತಿರುವ ತನ್ನ ತಲೆಯನ್ನು ಹೆಂಡತಿಯ ತೊಡೆಯ ಮೇಲೆ ಇಟ್ಟೊಡನೆಯೇ ನಿಟ್ಟುಸಿರು ಬಿಟ್ಟು ಪ್ರಾಣವನ್ನು ತೊರೆದನು. ಅವನನ್ನು ಅಪ್ಪಿಕೊಂಡು, ಕಂಬನಿಗರೆಯುತ್ತ ಆ ನಿರ್ಜನಾರಣ್ಯದಲ್ಲಿ ಸಾವಿತ್ರಿ ಒಬ್ಬಳೇ ಕುಳಿತಿದ್ದಳು. ಆಗ ಯಮದೂತರು ಸತ್ಯವಾನನ ಪ್ರಾಣವನ್ನು ಕೊಂಡೊಯ್ಯಲು ಬಂದರು. ಆದರೆ ಅವರಿಗೆ ಆಕೆಯ ಸಮೀಪಕ್ಕೂ ಹೋಗಲಾಗಲಿಲ್ಲ. ಅವಳ ಸುತ್ತ ಅಗ್ನಿಯ ವಲಯವಿತ್ತು. ಅವರು ಹಿಂತಿರುಗಿ ಹೋಗಿ ಸತ್ಯವಾನನ

ಜೀವವನ್ನು ತೆಗೆದುಕೊಂಡು ಬರಲು ಆಗಲಿಲ್ಲ ಎಂದು ಯಮಧರ್ಮನಿಗೆ ವಿವರಿಸಿದರು.



ಆಗ ಮೃತರಿಗೆ ತೀರ್ಪನ್ನು ಕೊಡುವ ಯಮ ಧರ್ಮನೇ ಬಂದನು. ಅವನು ದೇವನಾದುದರಿಂದ ಅಗ್ನಿಚಕ್ರದೊಳಗೆ ಹೋಗಬಲ್ಲವನಾಗಿದ್ದನು. ಸಾವಿತ್ರಿ ಯನ್ನು ಕುರಿತು, "ಮಗಳೇ, ಈ ಮೃತದೇಹವನ್ನು ಬಿಟ್ಟುಬಿಡು. ಮರ್ತ್ಯರೆಲ್ಲ ಮೃತರಾಗಲೇಬೇಕು. ಮೃತ ನಾದ ಮೊದಲ ಮರ್ತ್ಯ ನಾನೇ. ಅಂದಿನಿಂದ ಪ್ರತಿ ಯೊಬ್ಬರೂ ಸಾಯಬೇಕಾಗಿದೆ" ಎಂದನು. ಹೀಗೆ ಹೇಳಿದ ಮೇಲೆ ಸಾವಿತ್ರಿ ಹಿಂದೆ ಸರಿದಳು. ಯಮ ಸತ್ಯವಾನನ ಪ್ರಾಣವನ್ನು ಸೆಳೆದುಕೊಂಡು, ಮುಂದೆ ನಡೆದನು. ಅವನು ಸ್ವಲ್ಪ ದೂರ ಹೋಗುವುದರಲ್ಲಿ, ತರಗೆಲೆಗಳ ಮೇಲೆ ಕಾಲ ಸಪ್ಪಳ ಕೇಳಿಸಿತು. "ಮಗಳೇ ಸಾವಿತ್ರಿ, ನೀನು ಏತಕ್ಕೆ ನನ್ನನ್ನು ಹಿಂಬಾಲಿಸುತ್ತೀಯೆ? ಎಲ್ಲ ಮಾನವರ ಅಂತ್ಯವೇ ಇದು" ಎಂದನು. ಸಾವಿತ್ರಿ, "ತಂದೆ, ನಾನು ನಿನ್ನನ್ನು ಅನುಸರಿಸುತ್ತಿಲ್ಲ. ಆದರೆ ಇದು ಹೆಂಗಸರ ಗತಿ. ಅವಳು ಪತಿ ಹೋದೆಡ ಅವನನ್ನು ಹಿಂಬಾಲಿಸಬೇಕು. ಸನಾತನ ಧರ್ಮದಂತೆ, ಪ್ರೀತಿಸುತ್ತಿದ್ದ ಪತಿಯಿಂದ ಪತಿವ್ರತೆಯಾದ ಸತಿಯನ್ನು ಎಂದಿಗೂ ಅಗಲಿಸಬಾರದು" ಎಂದಳು. ಆಗ ಯಮ ಧರ್ಮರಾಯನು, "ನಿನ್ನ ಗಂಡನ ಪ್ರಾಣವನ್ನು ಹೊರತು ಮತ್ತಾವುದಾದರೂ ವರವನ್ನು ಕೇಳು" ಎಂದನು. "ನೀನು ನನಗೆ ವರವನ್ನು ಕೊಡುವ ಹಾಗಿದ್ದರೆ, ನನ್ನ ಮಾವ ಕುರುಡತನದಿಂದ ಪಾರಾಗಿ, ಸುಖವಾಗಿರಲಿ" ಎಂದು ಕೇಳಿ ಕೊಂಡಳು ಸಾವಿತ್ರಿ. "ಕರ್ತವ್ಯಪರಾಯಣಳಾದ ಮಗಳೇ, ನಿನ್ನ ಶುಭೇಚ್ಛೆ ಫಲಿಸಲಿ" ಎಂದನು ಯಮ. ಅನಂತರ ಯಮ ಸತ್ಯವಾನನ ಪ್ರಾಣ ದೊಂದಿಗೆ ಮುಂದುವರೆದನು. ಪುನಃ ಹಿಂದಿನಿಂದ ಅದೇ ಕಾಲ ಸಪ್ಪಳ ಕೇಳಿಸಿತು. ಹಿಂತಿರುಗಿ ನೋಡಿದ. "ಮಗಳೇ, ಸಾವಿತ್ರಿ, ನೀನು ಪುನಃ ನನ್ನನ್ನೇ ಅನುಸರಿಸುತ್ತಿರುವೆಯಲ್ಲ?" ಎಂದು ಕೇಳಿದ ಯಮ. " ಹೌದು ತಂದೆ, ಹಾಗೆ ಮಾಡದೆ ವಿಧಿಯಿಲ್ಲ. ನಾನು ಹಿಂತಿರುಗಿ ಹೋಗಬೇಕೆಂದು ಎಷ್ಟೋ ಪ್ರಯತ್ನಿಸುತ್ತಿರುವೆನು. ಆದರೆ ಮನಸ್ಸು ಸತ್ಯವಾನನನ್ನೇ ಅನುಸರಿಸುವುದು. ದೇಹವೂ ಅದನ್ನೇ ಹಿಂಬಾಲಿಸು ವುದು. ನನ್ನ ಜೀವವು ಎಂದೋ ಹೋಯಿತು. ಅವನ ಜೀವದಲ್ಲಿ ನನ್ನದೂ ಇದೆ. ನೀನು ಜೀವವನ್ನು ಸೆಳೆದರೆ, ದೇಹವೂ ಹಿಂಬಾಲಿಸು ವುದಿಲ್ಲವೇ? " ಎಂದಳು ಸಾವಿತ್ರಿ.

"ನಿನ್ನ ಮಾತಿನಿಂದ ನನಗೆ ತೃಪ್ತಿಯಾಯಿತು, ಸಾವಿತ್ರಿ, ನೀನು ಮತ್ತೊಂದು ವರವನ್ನು ಕೇಳು. ಆದರೆ ಅದು ಸತ್ಯವಾನನ ಪ್ರಾಣ ವಾಗಿರಬಾರದು" ಎಂದನು ಯಮ. " ತಂದೆ, ನೀನು ಇನ್ನೊಂದು ವರವನ್ನು ಕರುಣಿಸಬೇಕೆಂದು ಕೃಪೆ ಮಾಡಿದರೆ, ನನ್ನ ಮಾವನ ಕಳೆದು ಹೋದ ರಾಜ್ಯ ಮತ್ತು ಐಶ್ವರ್ಯ ಹಿಂತಿರುಗಲಿ" ಎಂದಳು ಸಾವಿತ್ರಿ. "ಪ್ರಿಯ ಮಗಳೇ, ಈ ವರವನ್ನು ಕರುಣಿಸಿದೆ. ಆದರೆ ಈಗ ಹಿಂತಿರುಗು. ಬದುಕಿರುವವರು ಯಾರೂ ಯಮನನ್ನು ಹಿಂಬಾಲಿಸಲಾರರು" ಎಂದ ಯಮ ಮುಂದೆ ಮುಂದೆ ಹೊರಟ. ಆದರೆ ಪತಿವ್ರತೆಯಾದ ಸಾವಿತ್ರಿ ತನ್ನ ಪತಿಯನ್ನು ಅನುಸರಿಸುವುದನ್ನು ಬಿಡಲಿಲ್ಲ. ಯಮ ಹಿಂತಿರುಗಿ ನೋಡಿ, "ಸಾಧ್ವಿ, ಸಾವಿತ್ರಿ, ವೃಥಾ ನನ್ನನ್ನು ಹಿಂಬಾಲಿಸಬೇಡ" ಎಂದನು. "ನೀನು ನನ್ನ ಪ್ರಿಯತಮನನ್ನು ಒಯ್ಯುವೆಡೆ ನಾನು ಬರದೇ ವಿಧಿಯಿಲ್ಲ ಎಂದಳು ಸಾವಿತ್ರಿ. ಆಗ ಯಮ, " ಹಾಗಾದರೆ ನಿನ್ನ ಗಂಡ ದುರಾತ್ಮ ನಾಗಿದ್ದರೆ, ನರಕಕ್ಕೆ ಅವನನ್ನು ಒಯ್ಯಬೇಕಾಗುವುದು. ಆಗಲೂ ನೀನು ಹಿಂಬಾಲಿಸುವೆಯೇನು?" ಎಂದು ಕೇಳಿದ. ಅದಕ್ಕೆ ಸಾವಿತ್ರಿ, " ಅವನು ಹೋದೆಡೆ ಸಂತೋಷದಿಂದ ಹೋಗುವೆನು. ಜನನವಾಗಲೀ, ಮರಣ ವಾಗಲೀ, ಸ್ವರ್ಗವಾಗಲೀ, ನರಕವಾಗಲೀ" ಎಂದಳು ಆ ಪ್ರಿಯ ಸತಿ. "ಮಗು, ಯೋಗ್ಯವಾದ ಮಾತುಗಳಿವು. ನಿನ್ನನ್ನು ಕಂಡು ನನಗೆ ತುಂಬ ಸಂತೋಷವಾಯಿತು. ಮತ್ತೊಂದು ವರವನ್ನು ಕೇಳು. ಆದರೆ ಮೃತರು ಬದುಕಲಾರರು" ಎಂದ ಯಮ. "ನೀನು ಹಾಗೆ ಮತ್ತೊಂದು ವರವನ್ನು ಕರುಣಿಸುವುದಕ್ಕೆ ಒಪ್ಪಿಕೊಂಡಿರುವುದರಿಂದ, ನನ್ನ ಮಾವನ ವಂಶ ನಾಶವಾಗದಿರಲಿ. ಅವನ ರಾಜ್ಯ ಸತ್ಯವಾನನ ಮಕ್ಕಳಿಗೆ ಬರಲಿ" ಎಂದಳು ಸಾವಿತ್ರಿ. ಆಗ ಯಮ ಮಂದಹಾಸದಿಂದ, "ಮಗಳೇ, ನಿನ್ನ ಇಚ್ಛೆ ಪೂರ್ತಿಯಾಗಲಿ, ನಿನ್ನ ಪತಿಯ ಪ್ರಾಣವಿಲ್ಲಿದೆ. ತೆಗೆದುಕೋ. ಅವನು ಪುನಃ ಜೀವಿಸುವನು. ಅವನೊಬ್ಬ ತಂದೆಯಾಗುವನು. ಕಾಲಕ್ರಮೇಣ ನಿಮ್ಮ ಮಕ್ಕಳು ರಾಜ್ಯವಾಳುವರು. ಈಗ ಮನೆಗೆ ಹಿಂತಿರುಗು. ಪ್ರೇಮ ಮೃತ್ಯುವನ್ನು ಜಯಿಸಿತು. ಯಾವ ಹೆಂಗಸೂ ನಿನ್ನಂತೆ ಗಂಡನನ್ನು ಪ್ರೀತಿಸಿಲ್ಲ. ನಿಜವಾದ ಪ್ರೇಮಶಕ್ತಿಯ ಎದುರಿಗೆ ಮೃತ್ಯುರಾಜನಾದವನೂ ಕೂಡ ಸೋತನೆಂಬುದಕ್ಕೆ ನೀನೊಂದು ಉದಾಹರಣೆ!"

**ಇದೇ ಸಾವಿತ್ರಿಯ ಕಥೆ. ಭರತಖಂಡದಲ್ಲಿ ಪ್ರತಿಯೊಬ್ಬ ಹುಡುಗಿಯೂ ಸಾವಿತ್ರಿಯಂತಾಗಬೇಕು. ಅವಳ ಪ್ರೇಮವನ್ನು ಮೃತ್ಯು ಜಯಿಸಲಾರದೆ ಹೋಯಿತು. ಅವಳು ಪ್ರೇಮದ ಅದ್ಭುತ ಶಕ್ತಿಯಿಂದ ಯಮನ ಕೈಗಳಿಂದಲೂ ತನ್ನ ಪತಿಯ ಪ್ರಾಣವನ್ನು ತೆಗೆದುಕೊಂಡು ಬಂದಳು.**

■